[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 333/2024**

ಪಿ.ಡಬ್ಲ್ಯು : 7 ಸಿ.ಡಬ್ಲ್ಯು : 17

ಸಾಕ್ಷಿದಾರನ ಹೆಸರು : ಸತೀಶ್ ಶೆಟ್ಟಿ

ತಂದೆಯ ಹೆಸರು : ಸುಂದರ ಶೆಟ್ಟಿ

ಪ್ರಾಯ : 43 ವರ್ಷ

ಉದ್ಯೋಗ : ಚಾಲಕ

ವಾಸ : ನಿಟ್ಟೆ

ದಿನಾಂಕ 31.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿಯನ್ನು ನೋಡಿದರೆ ಗುರುತಿಸಬಹುದು. ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ಆರೋಪಿಯನ್ನ ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ದಿಃ19.12.2022 ರಂದು ಪೊಲೀಸರು ಮಧ್ಯಾಹ್ನ ನನಗೆ ಕರೆ ಮಾಡಿ ಪೊಲೀಸ್ ಠಾಣೆಗೆ ಬರಲು ಹೇಳಿದರು. ಠಾಣೆಯಲ್ಲಿ ಆರೋಪಿಯನ್ನು ತೋರಿಸಿ ಇತನೇ ಕಳ್ಳತನ ಮಾಡಿರುತ್ತಾನ ಎಂದು ತಿಳಿಸಿರುತ್ತಾರೆ. ನಂತರ ಆರೋಪಿಗ ಹಾಗೂ ನನ್ನನ್ನು ಪೊಲೀಸರು ತಮ್ಮ ಇಲಾಖಾ ಜೀಪಿನಲ್ಲಿ ಕುಳ್ಳಿರಿಸಿಕೊಂಡು ದೂಪದಕಟ್ಟೆ ಮಾರ್ಗವಾಗಿ ನಿಟ್ಟೆ ಗ್ರಾಮದ ಬಾಬಕ್ಕ ಕಾಂಪ್ಲೆಕ್ಸ್ ನಲ್ಲಿರುವ ಸ್ವಸ್ತಿಕ್ ಎಂಟರ್ ಪ್ರೈಸಸ್ ಗೆ ಕರೆದುಕೊಂಡು ಹೋಗಿ ಆರೋಪಿ ತಾನು ಇಲ್ಲಿಯೇ ಕಳ್ಳತನ ಮಾಡಿರುತ್ತೇನೆ ಎಂದು ತೋರಿಸಿರುತ್ತಾರೆ. ನಂತರ ಪೊಲೀಸರು ಬೀಗ ಎಲ್ಲಿ ಎಂದು ಕೇಳಿದಾಗ ಆರೋಪಿಯು ಸದರಿ ಅಂಗಡಿಯ ಪೂರ್ವದಿಕ್ಕಿನಲ್ಲಿ ಬಿಸಾಡಿದ್ದು ತಂದು ತೋರಿಸಿರುತ್ತಾನೆ. ಪೊಲೀಸರು ಸದರಿ ಬೀಗವನ್ನು ವಶಕಪಡಿಸಿಕೊಂಡಿರುತ್ತಾರೆ. ನಂತರ ಪೊಲೀಸರು ಮಹಜರು ತಯಾರಿಸಿ ಭಾವಚಿತ್ರ

ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಮಹಜರನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರನ್ನು ಈಗಾಗಲೆ ನಿಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ನನ್ನೊಂದಿಗೆ ಚಾಸಾ-2 ರವರು ಇದ್ದರು. ಸಾಕ್ಷಿಯು ಸದರಿ ಮಹಜರು ಸಮಯ ಸ್ಥಳದಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-4 ರಿಂದ 7 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬೀಗವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು ಮಾ-1 ಎಂದು ಗುರುತಿಸಲಾಗಿದೆ.

ನಂತರ ದಿಃ13.01.2023 ರಂದು ಪೊಲೀಸರು ಕರೆ ಮಾಡಿ ಠಾಣೆಗೆ ಕರೆಸಿರುತ್ತಾರೆ. ಅದೇ ದಿನ ಚಾಸಾ-1 ರವರು ಕಟ್ಟಡದ ಸಿಸಿ ಟಿವಿ ಫೊಟೆಜನ್ನು ನೀಡುವ ಸಮಯ ನನ್ನನ್ನು ಕರೆಸಿರುತ್ತಾರೆ. ಚಾಸಾ-1 ರವರು ಸಿಸಿಟಿವಿ ಫೊಟೆಜನ್ನು ಪೊಲೀಸರಿಗೆ ನೀಡಿರುತ್ತಾರೆ. ಸದರಿ ಸಮಯ ಪೊಲೀಸರು ಮಹಜರು ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿ ಸದರಿ ಮಹಜರನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿಪಿ-8 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> ಃ ಆರೋಪಿ ಪರ ಃ ಶ್ರೀ ಎ ಕೆ ಎಂ ವಕೀಲರಿಂದ ಃ

ನಾನು ನಿಟ್ಟೆ ಗ್ರಾಮದಲ್ಲಿ ಚಾಲನೆಯನ್ನು ಕಲಿಸುವ ಕೆಲಸ ಮಾಡಿಕೊಂಡಿರುತ್ತೇನೆ ಹಾಗೂ ನನಗೆ ನನ್ನ ಸ್ವತಃ ಅಟೋ ಲಿಂಕ್ಸ್ ಇದ್ದು ಅದರ ಕಚೇರಿಯು ಬಾಬಕ್ಕ ಕಾಂಪ್ಲೆಕ್ಸ್ ನಿಟ್ಟೆಯಲ್ಲಿ ಇರುತ್ತದೆ. ನಾನು ಮತ್ತು ಚಾಸಾ-1 ರವರು ಒಂದೇ ಕಟ್ಟಡದಲ್ಲಿ ಬಾಡಿಗೆ ಪಡೆದುಕೊಂಡಿರುತ್ತೇವೆ. ಪೊಲೀಸರು ಕರೆ ಮಾಡುವಾಗ ನಾನು ನಿಟ್ಟೆಯ ಹಾಳೆ ಕಟ್ಟೆ ಎಂಬ ಸ್ಥಳದಲ್ಲಿ ಇದ್ದೆ. ಯಾವ ಪೊಲೀಸ್ ಕರೆ ಮಾಡಿದ್ದಾರೆ ಎಂದು ನಾನು ಹೆಸರು ತಿಳಿದುಕೊಂಡಿರುವುದಿಲ್ಲ. ಕಾರ್ಕಳ ಪೊಲೀಸ್ ಠಾಣೆಯಿಂದ ನಿಟ್ಟೆಗೆ 10 ಕಿ ಮಿ ದೂರ ಇದೆ. ಕರೆ ಬಂದ 15 ನಿಮಿಷಗಳ ನಂತರ ಠಾಣೆಗೆ ಹೋಗಿರುತ್ತೇನೆ. ಠಾಣೆಗೆ

ಹೋದಾಗ ಆರೋಪಿ ಮತ್ತು 4 ಜನ ಪೊಲೀಸರು ಇದ್ದರು. ಅವರು ಯಾರೆಲ್ಲ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನನ್ನ ಮೊಬೈಲ್ ಸಂಖ್ಯೆ ಹೇಗೆ ದೊರಕಿದೆ ಎಂದು ಗೊತ್ತಿಲ್ಲ, ಸಾಕ್ಷಿ ಮುಂದುವರಿದು ಪೊಲೀಸರಲ್ಲಿ ನನ್ನ ನಂಬರ್ ಇದೆ ನಾನು ಪಂಚಾಯತ್ ಸದಸ್ಯನಾಗಿದ್ದಾಗ ಠಾಣೆಗೆ ಹೋಗಿ ಬರುತ್ತಿದ್ದೆ. ಪೊಲೀಸರು ಠಾಣೆಯಲ್ಲಿ ಅರ್ಧ ಗಂಟೆ ಇದ್ದೇವು. ಪೊಲೀಸರು ಠಾಣೆಯಲ್ಲಿ ದಾಖಲೆಯನ್ನು ತಯಾರು ಮಾಡುತ್ತಿದ್ದಾರೊ ಎಂದು ನಾನು ನೋಡಿರುವುದಿಲ್ಲ. ಠಾಣೆಯಿಂದ ಘಟನಾಸ್ಥಳಕ್ಕೆ ಮಧ್ಯಾಹ್ನ 2.30 ಗಂಟೆಗೆ ಹೊರಟಿರುತ್ತೇವೆ. ಘಟನಾ ಸ್ಥಳಕ್ಕೆ ಹೋದಾಗ ಘಟನಾ ಸ್ಥಳದಲ್ಲಿ ನಾನು, ಚಾಸಾ-1,2 ಮತ್ತು 4 ಹಾಗೂ ಪೊಲೀಸರು ಇದ್ದೇವು. ಸ್ಥಳದಲ್ಲಿ ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಇದ್ದೇವು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ 2 ಬಾರಿ ಹೋಗಿರುತ್ತೇನೆ. ಪೊಲೀಸ್ ಠಾಣೆಯಲ್ಲಿ 2 ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಯಾವೆಲ್ಲ ಪೊಲೀಸರು ಇದ್ದರು ಎಂದು ನನಗೆ ಪರಿಚಯ ಇರುವುದಿಲ್ಲ. ಸ್ಥಳಕ್ಕೆ ಎಷ್ಟು ಬಾರಿ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಅಂಗಡಿಯ ಒಳಗೆ ಕಾಪಾಟು, ಮೇಜು, ಫ್ರೀಜ್, ತಿಂಡಿಗಳು ಇತ್ತು. ಸದರಿ ವಿಷಯಗಳನ್ನು ಮಹಜರಿನಲ್ಲಿ ಬರೆದಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಮಹಜರಿಗೆ ನಾನು ಹಾಗೂ ಚಾಸಾ-2/ಸಂಜೀವ ಪೂಜಾರಿ ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಇತನೇ ಆರೋಪಿ ಎಂದು ಪೊಲೀಸರು ಹೇಳಿದ್ದರಿಂದ ಗೊತ್ತಾಗಿರುತ್ತದೆ. ಸದರಿ ಕಟ್ಟಡದಲ್ಲಿ ನನ್ನ ಮತ್ತು ಚಾಸಾ-1 ರವರ ಅಂಗಡಿಗೆ 3 ಅಂಗಡಿ ಮಾಲಿಗೆಗಳ ಅಂತರ ಇದೆ.

ಚಾಸಾ-1 ರವರ ಅಂಗಡಿ ಮಳಿಗೆಯನ್ನು ಬೆಳಿಗ್ಗೆ ಎಷ್ಟು ಗಂಟೆಗೆ ತೆರೆಯುತ್ತಾರೆ ಹಾಗೂ ರಾತ್ರಿ ಎಷ್ಟು ಗಂಟೆಗೆ ಮುಚ್ಚುತ್ತಾರೆ ಎಂದು ನನಗೆ ಗೊತ್ತಿಲ್ಲ. ಮು ಮಾ-1 ಚಾಸಾ-1 ರವರ ಅಂಗಡಿಯದ್ದೆ ಎಂದು ನಿಮಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆರೋಪಿ ಮಹಜರು ದಿನ ಕಾಡಿನಿಂದ ತಂದು ನೀಡಿರುತ್ತಾರೆ. ಮಹಜರನ್ನು ಪ್ರಿಂಟ್ ಹಾಗೂ ತಯಾರು ಮಾಡಿದ್ದು ಎಲ್ಲಿ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ-1 ರವರು ನನಗೆ ಪರಿಚಯ ಇರುವುದರಿಂದ

ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನವ ಸಮಕ್ಷಮ ಯಾವುದೇ ಮಹಜರನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ಸೊತ್ತನ್ನು ಸ್ವಾ ಧೀನಪಡಿಸಿಕೊಂಡಿರುವುದಿಲ್ಲ, ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರಿಗೆ ಬರಲು ಪೊಲೀಸರು ನೋಟಿಸು ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2 ನೇ ಬಾರಿಗೆ ಪೊಲೀಸ್ ಠಾಣೆಗೆ 1.00 ಗಂಟೆಗೆ ಹೋಗಿರುತ್ತೇನೆ. ಆ ದಿನ ಪೊಲೀಸರು ಕರೆ ಮಾಡಿ ಬರಲು ತಿಳಿಸಿರುತ್ತಾರೆ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ